ಶ್ರೀ ಎಚ್ ಎಂ. ಮಲ್ಲಿಕಾರ್ಜುನಪ್ಪನವರು.—ಅವರೂ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಹೇಳಿದರೆ ಅವರಿಗೆ ನೀರು ಸಿಕ್ಕುವ ಭರವಸೆಯಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಪ್ಲಾನಿಂಗ್ ಸಮಿತಿಯಲ್ಲಿ ಇತ್ಯರ್ಥವಾಗಬೇಕು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಅದಷ್ಟು ಜಾಗ್ರತೆ ಅದನ್ನು ಏಮರ್ಜೆಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತೇವೆ.

Mr. SPEAKER.—Next question. Sri K. Sampangi Ramiah. The Hon'ble Member is not present. Question No. 88 will he treated as an unstarred question.

Next question. Sri K. Puttaswamy.

Supply of Fruit plants by the Gardens Department.

*Q.—97. Sri K. PUTTASWAMY (Mandya District—General).—

Will the Government be pleased to state :—

(*a*) whether fruit plants are supplied by the Gardens Department ;

(*b*) how many are supplied to people;

(*c*) in what other way the Gardens Department is of use to the agriculturist?

A.—The Hon'ble Sri T. MARIAPPA (Home Minister).—

(*a*) Yes.

(*b*) 1948-49. ... 151,324 plants.
1949-50 ... 126,424 ,,
1950-51 ... 325,402 ,,

(*c*) The Gardens Department is helpful to the agriculturists in helping them to cultivate horticultural crops, to acquaint them with the methods of scientific cultivation and in securing them pedigree plants and seeds at reasonable rates and to educate them regarding plant pest and in giving general advice regarding horticultural problems.

ಶ್ರೀ ಕೆ. ಪುಟ್ಟಸ್ವಾಮಿಯವರು.—1,23,424 ಸಸಿಗಳನ್ನು ರೈತರಿಗೆ ಕೊಟ್ಟಿದೆ ಎಂದು ಹೇಳಿದ್ದೀರಿ. ಅದರಲ್ಲಿ ಎಷ್ಟು ಸಸಿಗಳನ್ನು ನೆಟ್ಟಿದ್ದಾರೆ ಎಂಬ ಅಂಕಿ ಅಂಶ ಇದೆಯೇ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಎಲ್ಲಾ ನೆಟ್ಟಿದ್ದಾರೆ ಎಂದು ಭಾವಿಸಿದ್ದೇವೆ. ಕೊಡುವುದು ಮಾತ್ರ ನಮ್ಮ ಕೆಲಸ. ಯಾರ್ಯಾರು ಗಿಡ ಹಾಕುತ್ತೇವೆ ಎಂದು ಹೇಳುತ್ತಾರೋ ಅವರಿಗೆಲ್ಲಾ ಗಿಡ ಹಾಕುವುದಕ್ಕೆ ಹುಮ್ಮಸ್ಸು ಇರುತ್ತದೆ. ವನಮಹೋತ್ಸವದ ಕಾರ್ಯಕ್ರಮದಂತೆ ಬಹಳ ಭಾಗ ನೆಟ್ಟಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಅವುಗಳನ್ನೆಲ್ಲಾ ಮುಫತ್ತಾಗಿ ಕೊಟ್ಟಿದ್ದೀರೋ ಅಥವಾ ದುಡ್ಡಿಗೆ ಕೊಟ್ಟಿದ್ದೀರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಕಾಸ್ಟ್ ಪ್ರೈಸ್‌ಗೆ ಕೊಟ್ಟಿದ್ದೇವೆ. ಕೆಲವು ಮುಫತ್ತಾಗಿ ಕೊಟ್ಟಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿಯವರು.—ಆ ರೀತಿ ಕಾಸ್ಟ್ ಪ್ರೈಸ್‌ಗೆ ಕೊಟ್ಟಿರೋದರಲ್ಲಿ ಎಷ್ಟು ಹಣ ಬಂದಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ತೋಟದ ಇಲಾಖೆಯವರು ನರಸಿಗಳನ್ನು ಸರಬರಾಯಿ ಮಾಡಿರುವುದರಲ್ಲಿ ತಾಯಿಬೇರು ಕಡಿದುಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ತಾಯಿಬೇರು ಕಡಿದಿರುವುದರಿಂದ ದೊಡ್ಡದಾಗಿ ಬೆಳೆದಿರುವ ಗಿಡಗಳೆಲ್ಲ ಒಣಗಿಹೋಗುತ್ತಿವೆ ಎಂಬ ಅಂಶವನ್ನು ಯಾರಾದರೂ ಸರ್ಕಾರದವರ ಗಮನಕ್ಕೆ ತಂದಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಕೆ. ವೀರಣ್ಣಗೌಡರು.—ಹಾಗೆ ತಂದಿದ್ದ ಕಾಲದಲ್ಲಿ ಪರೀಕ್ಷೆ ಮಾಡಿ ಮುಂದಿನ ವರ್ಷ ತಾಯಿಬೇರು ತೆಗೆಯದಹಾಗೆ ತಿಳಿವಳಿಕೆ ಕೊಡುತ್ತೇವೆ ಎಂಬುದಾಗಿ ಭರವಸೆ ಕೊಟ್ಟಿದ್ದರೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾಯಿಬೇರು ಕಡಿಯಕೂಡದು, ಗಿಡ ಒಣಗಿಹೋಗುತ್ತದೆ ಎಂಬುದಾಗಿ ಖಚಿತವಾಗಿ ತಿಳಿಸಲಾಗಿದೆ. ನರಸಿ ಕೊಡುವಾಗ ಹುಷಾರಾಗಿ ತೆಗೆದುಕೊಟ್ಟಿದ್ದಾರೆ, ಬಹು ಭಾಗದಲ್ಲಿ ಗಿಡಗಳು ಚೆನ್ನಾಗಿ ಬಂದಿವೆ ಎಂಬುದಾಗಿ ವರದಿ ಬಂದಿದೆ.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಈಗ ಮೂರು ವರ್ಷದಿಂದ ಸರ್ಕಾರದವರಿಗೆ ಹಣ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳುತ್ತೀರಾ ?

ಮಾನ್ಯ ಟಿ. ಮರಿಯಪ್ಪನವರು.—ಇದರಲ್ಲಿ ಹಣ ಖರ್ಚಾಗುವುದು ಮುಖ್ಯ ದೃಷ್ಟಿಯಲ್ಲ. ಗಿಡಗಳನ್ನು ಬೆಳೆಸುವುದಕ್ಕೆ ಸಾರ್ವಜನಿಕರಿಗೆ ನರಸಿ ಒದಗಿಸಬೇಕು.

ಶ್ರೀ ಬಿ. ಚನ್ನಬೈರೇಗೌಡರು.—ಮೂರು ವರ್ಷಕ್ಕೆ ಹಣ ಎಷ್ಟು ವೆಚ್ಚವಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೆರೆ ಹೇಳಬರ್ಲೆ. 1948-49ರಲ್ಲಿ 7,804 ಗ್ರಾಫ್ಟೆಡ್ ಪ್ಲಾಂಟ್ಸ್ ಕೊಟ್ಟಿದೆ ಇತರ ನಸಿಗಳು 33,929 ಬೆರೆ. 41, 33 ರೂಪಾಯಿ. 1949-50ರಲ್ಲಿ 39,576 ರೂಪಾಯಿ. 1950-51ರಲ್ಲಿ 85,678 ರೂಪಾಯಿ.

ಶ್ರೀ ಬಿ. ಚನ್ನಬೈರೇಗೌಡರು.—1½ ಲಕ್ಷ ರೂಪಾಯಿ ಖರ್ಚಾಗಿದೆ. ಇದಕ್ಕೆ ಎಷ್ಟು ನಸಿಗಳು ಚೆನ್ನಾಗಿ ಬರಬಹುದು ಎಂಬುದಾಗಿ ಗೊತ್ತಾಗಿದೆ ?

ಮಾನ್ಯ ಟಿ. ಮರಿಯಪ್ಪನವರು.—ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಗಿಡದ ಮೇಲಿನ ಪ್ರೇಮದಿಂದ ನಸಿಗಳನ್ನು ಮಹಿನೀಯರು ತೆಗೆದುಕೊಂಡಿದ್ದಾರೆ. ನುಮಾರು 5% ಸರಿಯಾಗಿ ಬಂದಿಲ್ಲದೆ ಇರಬಹುದು.

ಶ್ರೀ ಬಿ. ಚನ್ನಬೈರೇಗೌಡರು.—1948-49ರಲ್ಲಿ 41 ಸಾವಿರ ಚಿಲ್ಲರೆ ರೂಪಾಯಿ ಆಗಿದೆ ಎಂದು ತಿಳಿಸಿದ್ದೀರಿ.

ಅದರಲ್ಲಿ ಎಷ್ಟು ಸಸಿಗಳು ಚೆನ್ನಾಗಿ ಬರಬಹುದು ಎಂಬ ವಿಚಾರದಲ್ಲಿ ವರದಿ ತರಿಸಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜನಗಳು ಗಿಡ ಹಾಕುವುದಕ್ಕೋಸ್ಕರ ಸಸಿಗಳನ್ನು ತೆಗೆದುಕೊಂಡು ಹೋಗುತ್ತಾರೆ ಅವರ ಮೇಲೂ ಜವಾಬ್ದಾರಿ ಇರುತ್ತದೆ. ಆದ್ದರಿಂದ ಪ್ರಾಯಶಃ ತೆಗೆದುಕೊಂಡು ಹೋಗಿರುವುದೆಲ್ಲಾ ಬರದೇ ಇದ್ದರೂ ಬಹುಭಾಗ ಚೆನ್ನಾಗಿ ಬರುತ್ತದೆಂದು ಭಾವಿಸಬಹುದು.

ಶ್ರೀ ಬಿ. ಚನ್ನಬೈರೇಗೌಡರು.—ಸರ್ಕಾರದ ದುಡ್ಡು ಖರ್ಚಾಗಿರುವಾಗ, ಅದರಿಂದ ಜನರಿಗೆ ಪ್ರಯೋಜನವಿದೆ, ಅನುಕೂಲವಾಗುತ್ತದೆ ಎಂಬುದನ್ನು ನಂಬಿಕೊಂಡು ತಾನೆ ಕೊಟ್ಟಿರುವುದು ?

The Honb'le Sri T. MARIAPPA.—That question is obvious. In fact we want people to take every care of these plants.

ಶ್ರೀ ಬಿ. ಚನ್ನಬೈರೇಗೌಡರು.—ಮೂರು ವರ್ಷಕ್ಕೆ 1½ ಲಕ್ಷ ರೂಪಾಯಿ ಖರ್ಚು ಮಾಡಿರುವಾಗ ಅದರಿಂದ ಪ್ರಯೋಜನವಾಗಿದೆಯೇ ಇಲ್ಲವೇ ಎಂಬ ಬಗ್ಗೆ ವರದಿ ತರಿಸಿಕೊಳ್ಳಬೇಕಾದ್ದು ಸರ್ಕಾರದವರ ಕರ್ತವ್ಯವಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಚೆಗೆ ಬಂದಿರುವ ವರದಿಯನ್ನು ಆಗಲೇ ಪ್ರೆಸ್ ನೋಟ್‌ನಲ್ಲಿ ಪ್ರಕಟಿಸಿದ್ದೇವೆ. ಅನೇಕ ಗಿಡಗಳನ್ನು ನೆಟ್ಟಿದ್ದಾರೆ. ಅನೇಕ ಗಿಡಗಳು ಚೆನ್ನಾಗಿ ಬರುತ್ತ ಇವೆ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಸಸಿಗಳನ್ನು ನರ್ಕಾರಿ ನರ್ಸರಿಗಳಿಂದ ಕೊಟ್ಟಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಗಾರ್ಡನ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ನರ್ಸರಿಗಳಿಂದಲೂ ಕೊಟ್ಟಿದ್ದಾರೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟ ನರ್ಸರಿಗಳಿಂದಲೂ ಕೊಟ್ಟಿದ್ದಾರೆ.

ಶ್ರೀ ಎಸ್ ಕರಿಯಪ್ಪನವರು.—ಖಾಸಗಿ ನರ್ಸರಿಗಳಿಂದ ಉದಾಹರಣೆಗೆ ಓಬಳಪ್ಪನವರ ನರ್ಸರಿಯಿಂದ ಸಸಿಗಳನ್ನು ತೆಗೆದುಕೊಂಡಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತೆಗೆದುಕೊಂಡಿರಬಹುದು. ಅನೇಕ ಜನ ಖಾಸಗೀ ಮಹನೀಯರು ನರ್ಸರಿ ಇಟ್ಟುಕೊಂಡಿದ್ದಾರೆ. ಅಲ್ಲಿಂದಲೂ ತೆಗೆದುಕೊಂಡು ಹಾಕಿರಬಹುದು.

ಶ್ರೀ ಎಸ್. ಕರಿಯಪ್ಪನವರು.—ಗಾರ್ಡನ್ ಡಿಪಾರ್ಟ್‌ಮೆಂಟಿನವರು ಖಾಸಗಿ ನರ್ಸರಿಗಳಿಂದ ಸಸಿಗಳನ್ನು ತೆಗೆದುಕೊಂಡು ಸರಬರಾಯಿಮಾಡಿರುವುದು ಉಂಟೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ನಮ್ಮ ನರ್ಸರಿಗಳಲ್ಲಿ ಬೆಳೆದ ಸಸಿಗಳು ಬೇಕಾದಷ್ಟು ಇವೆ.

ಶ್ರೀ ಎಸ್. ಕರಿಯಪ್ಪನವರು.—ನರ್ಕಾರಿ ನರ್ಸರಿಗಳಲ್ಲಿ ಹೆಚ್ಚು ಸಸಿಗಳನ್ನು ಬೆಳೆಸದೆ ಆ ಕಡೆ ಈ ಕಡೆಗಳಿಂದ ತರಿಸಿಕೊಂಡು ತಮ್ಮದೇ ಎಂಬುದಾಗಿ ರೇಬಲ್ ಹಾಕಿ ಕೊಟ್ಟಿರುವುದು ಗೊತ್ತಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮ ನರ್ಸರಿಗಳಲ್ಲಿ ಬೆಳೆದ ಸಸಿಗಳನ್ನು ಗಾರ್ಡನ್ ಡಿಪಾರ್ಟ್‌ಮೆಂಟಿನವರು ಬೇರೆ ಕಡೆಯಿಂದ ತರಿಸಿಕೊಟ್ಟಿರಬಹುದೇನಾ ಇಲ್ಲ ನೆಟ್ಟಿರುವ ಗಿಡಗಳೆಲ್ಲಾ ನಮ್ಮ ನರ್ಸರಿಗಳಲ್ಲಿ ಬೆಳೆದಿರುವುದೇ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಹಣ್ಣಿನ ಗಿಡಗಳ ರೋಗನಿವಾರಣೆಗೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಖಾಯಿಲೆ ಬಂದಿದೆ ಎಂದು ತಿಳಿದ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಅದಕ್ಕೆ ಬೇಕಾದಷ್ಟು ಲಿಟರೇಚರನ್ನು ಪಬ್ಲಿಷ್ ಮಾಡಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಜನಗಳು ಬಂದು ತಿಳಿಸಿದರೆ ಮಾತ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ, ಏಕೆಂದರೆ ಎಲ್ಲಾ ಕಡೆಯೂ ಗಾರ್ಡನ್ ಡಿಪಾರ್ಟ್‌ಮೆಂಟಿನ ಶಿಬ್ಬಂದಿ ಇಲ್ಲ.

ಶ್ರೀ ಜಿ. ನಾರಾಯಣಗೌಡರು.—ಕೋಲಾರ ಜಿಲ್ಲೆಯ 2 ತಾಲ್ಲೂಕುಗಳಲ್ಲಿ ಸುಮಾರು 12,000 ಮಾವಿನ ಗಿಡಗಳು ಇರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟು ಸಾವಿರ ಇದೆ ಎಂದು ನೋಳುವುದಕ್ಕಾಗುವುದಿಲ್ಲ. ಮಾವಿನ ಗಿಡಗಳು ಜಾಸ್ತಿ ಇವೆ.

ಶ್ರೀ ಜಿ. ನಾರಾಯಣಗೌಡರು.—ಅಲ್ಲಿ ಪ್ರತಿವರ್ಷವೂ ಆ ಗಿಡಗಳು ರೋಗಕ್ಕೆ ತುತ್ತಾಗಿ ಮಾವಿನ ಸಸಿಗಳು ಕಡಿಮೆಯಾಗುತ್ತಾ ಇರುವುದು ಗೊತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಇಲಾಖೆಯವರು ಇದಕ್ಕೆ ಸರಿಯಾಗಿ ಗಮನಕೊಡುತ್ತಿಲ್ಲ ಎಂಬುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಗಮನ ಕೊಡದಿದ್ದರೆ ಕೂಡಲೇ ಗಮನ ಕೊಡುವ ರೀತಿಯಲ್ಲಿ ಏರ್ಪಾಡು ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—ಮಾವಿನ ಫಸಲಿನ ರೋಗ ನಿವಾರಣೆಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಾವು ಇಲಾಖೆಯವರಿಗೆ ತಕ್ಷಣ ತಿಳಿವಳಿಕೆ ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇಕಾದರೆ ಇವತ್ತೇ ತಕ್ಷಣ ಕೊಡುತ್ತೇನೆ.

ಶ್ರೀ ಎಂ. ಗೋವಿಂದ ರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಗಿಡ ಕೊಡಬೇಕಾದರೆ ಯಾವ ಕಾಲದಲ್ಲಿ ಕೊಡುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮುಂಗಾರು ಮಳೆ ಬಂದ ಮೇರೆ ಕೊಡುತ್ತೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಮುಂಗಾರು ಮಳೆ ಬರುವುದಕ್ಕೆ ಮುಂಚೆ ಕೊಟ್ಟಿರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಮಳೆ ಬಿದ್ದು, ನೆಲದ ಹಸಿ ಆರಿ ಹೋದ ಮೇಲೆ ಗಿಡಗಳನ್ನು ಕೊಟ್ಟಿರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇಂಥವರೇ, ಕೊಡಬೇಕೆಂದು ನಿರ್ದಿಷ್ಟವಾದ ಕ್ರಮ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರೂರಲ್ ಡೆವಲಪ್‌ಮೆಂಟ್ ಕಮಿಟಿ, ಗ್ರಾಮ ಪಂಚಾಯಿತಿ ಮತ್ತು ಮುನಿಸಿಪಾಲಿಟಿಯವರೂ ಕೊಡಬೇಕೆಂದಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಗಿಡ ಕೊಂಡು ಕೊಳ್ಳಲು ಶಕ್ತಿ ಇದ್ದವರಿಗೆ ಮಾರಾಟಮಾಡಬೇಕು ಮುಖ್ಯ ತ್ಯಾಗಿ ಕೊಡಕೂಡದು ಎಂದು ಸರ್ಕಾರದವರು ಅಭಿಪ್ರಾಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು. ಕೊಂಡುಕೊಳ್ಳಲು ಶಕ್ತ ಇದ್ದವರು ಕೊಂಡುಕೊಳ್ಳ ಬಹುದು.

Mr. SPEAKER.—Next question. Sri H. Siddaveerappa. The Hon'ble Member is not present. Question No. 108 will be treated as an unstarred question.

Next question. Sri W. H. Hanumanthappa.

Scheme for increased Supply of drinking water to Bangalore from Chamrajendra Water Works.

Q.*—142. **Sri W. H. HANUMANTHAPPA (Bangalore District—General)—

Will the Government be pleased to state :—

(*a*) whether they are aware that the supply of drinking water in Bangalore is inadequate for the growing City ;

(b) whether they will execute the scheme estimated to cost Rs. 39 lakhs for increasing the supply of water from the Chamarajendra Water Works ?

A.—**The Hon'ble Sri T. MARIAPPA** (Home Minister).—

(*a*) Yes.

(*b*) The scheme is under consideration.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು. – ಇವತ್ತಿನಿಂದ ಬೆಂಗಳೂರಿನಲ್ಲಿ ಬೆಳಿಗ್ಗೆ 10 ಘಂಟೆಯಿಂದ ಸಾಯಂಕಾಲ 4 ಘಂಟೆಯವರೆಗೆ ನೀರು ಸರಬರಾಯಿ ಮಾಡುವುದಿಲ್ಲ ಎಂದು ಹೇಳಿರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೀರಿಗೆ ಅನಾನುಕೂಲವಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇಂಟರ್‌ಮಿಟೆಂಟ್ ಆಗಿ ನೀರು ಸರಬರಾಯಿ ಮಾಡುವುದರಿಂದ ಹೊರಗಿನಿಂದ ಬರುವವರಿಗೆ ಅನಾನುಕೂಲ ಎಂಬುದು ಸರ್ಕಾರದವರಿಗೆ ತಿಳಿದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ವೇಳೆ ಅನೇಕ ಕಾರಣಗಳಿಂದ ಈ ತರಹ ರೇಷ್ಟ್ ಮಾಡಬೇಕಾಗುತ್ತದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—39 ಲಕ್ಷ ರೂಪಾಯಿಗೆ ಅಂದಾಜು ಮಾಡಿದ್ದರೂ ಇದುವರೆಗೆ ಆ ಕಾರ್ಯವನ್ನು ಏಕೆ ಕೈಕೊಳ್ಳಲಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—The scheme is under consideration ಎಂಬುದಾಗಿ ಉತ್ತರ ಕೊಟ್ಟಿದೆ. ಯಾವ ಯಾವ ಹಂತದಲ್ಲಿ ಮಾಡಬೇಕು, ಸಾಮಾನುಗಳನ್ನು ಹೇಗೆ ಒದಗಿಸಿಕೊಳ್ಳಬೇಕು ಎಂಬುದನ್ನೆಲ್ಲಾ ಆಲೋಚಿಸಬೇಕಾಗಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇದು ಎಷ್ಟು ವರ್ಷದಿಂದ ಸರ್ಕಾರದವರ ಪರಿಶೀಲನೆಯಲ್ಲಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಫೈನಲೈಸ್ ಆಗಿ ಬಡ್ಜೆಟ್ ಟೈಮಿನಲ್ಲಿ ಸರ್ಕಾರದವರ ಕೈಗೆ ಬಂತು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಇದನ್ನು ಹೋದ ಅಧಿವೇಶನದಲ್ಲೇ ಪರ್ಯಾಲೋಚಿಸುತ್ತೇವೆ ಎಂಬುದಾಗಿ ಸರ್ಕಾರದವರು ಹೇಳಿರಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ಅಧಿವೇಶನದಲ್ಲಿ ಹಣ ಸಾಕಾದಷ್ಟು ಇರಲಿಲ್ಲ. ಅದಕ್ಕೋಸ್ಕರವೇ ತೆಗೆದುಕೊಳ್ಳಲಿಲ್ಲ. ಈ ವರ್ಷ ಪರಿಶೀಲಿಸುತ್ತೇವೆ.

ಶ್ರೀ ಡಬ್ಲ್ಯು. ಎಚ್ ಹನುಮಂತಪ್ಪನವರು.—ಈ ವರ್ಷದ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸಲು ಸಾಧ್ಯವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಡ್ಜೆಟ್ಟೆಲ್ಲಾ ತಮ್ಮ ಕೈಗೇ ಕೊಟ್ಟಿದೆ. ತಾವೇ ನೋಡಬಹುದು.

ಶ್ರೀ ಡಬ್ಲ್ಯು. ಹೆಚ್. ಹನುಮಂತಪ್ಪನವರು.—ಈಗ ಬೇಸಿಗೆ ಕಾಲವಾಗಿರುವುದರಿಂದ ಇದನ್ನು ಕೂಡಲೆ ಕೈಕೊಳ್ಳುವ ಅಗತ್ಯವಿದೆಯೆಂಬುದು ಸರ್ಕಾರದವರಿಗೆ ತಿಳಿದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದನ್ನು ಆದಷ್ಟು ಜಾಗ್ರತೆ ಮಾಡಬೇಕೆಂಬುದೇ ಸರ್ಕಾರದವರ ಉದ್ದೇಶ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಮಿಲಿಟರಿ ಇಲಾಖೆಗೂ ಕೂಡ ಇದರಿಂದ ಸರ್ಕಾರದವರು ನೀರನ್ನು ಸರಬರಾಯಿ ಮಾಡುತ್ತಿದ್ದಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಹೀಗೆ ನೀರಿನ ಸರಬರಾಯಿಗೆ ತೊಂದರೆಯಾದರೆ ಅವರಿಗೆ ಬಹಳ ಕಷ್ಟವಾಗುತ್ತದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಕಷ್ಟ ಅವರೊಬ್ಬರಿಗೇ ಅಲ್ಲ. ಬೆಂಗಳೂರು ವಿಸ್ತಾರವಾಗುತ್ತಿದೆ. ಇತರ ಅನೇಕ ಕೈಗಾರಿಕೆಗಳೂ ಪ್ರಾರಂಭವಾಗುತ್ತಿವೆ. ಆದ್ದರಿಂದ ಇದನ್ನು ಕೈಕೊಳ್ಳಬೇಕು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹೇಗೆ ದುಡ್ಡನ್ನು ಒದಗಿಸಬೇಕೆಂಬ ಮಹಾಸಮಸ್ಯೆ ಬಾಧಿಸುತ್ತಿದೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಮುಂದಾದರೂ ಇಂಥಾ ಅನಾನುಕೂಲತೆ ಬರಬಹುದೆಂದು ಈ ಸ್ಕೀಮನ್ನು ತಯಾರಿಸಿದ್ದು ನಿಜವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜನರಿಗಿರತಕ್ಕ ತೊಂದರೆ ಕಡಿಮೆಯಾಗಬೇಕು, ದಿನೇ ದಿನೇ ಹೆಚ್ಚುತ್ತಿರುವ demand ನ್ನು meet ಮಾಡಬೇಕೆಂದೇ ಈ ಎಸ್ಟಿಮೇಟನ್ನು ತಯಾರಿಸಿದ್ದು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಹೀಗೆ ನೀರಿನ ಅನಾನುಕೂಲತೆಯಿಂದ ತಮ್ಮ ಸರ್ಕಾರಿ ಇಲಾಖೆಯವರಿಂದೇನಾದರೂ ನಿಮಗೆ ಒತ್ತಾಯ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲಾಖೆಯವರಿಂದ ಒತ್ತಾಯ ಬರುವುದಿರಲಿ, ಸರ್ಕಾರದವರೇ ಇಲ್ಲಿನ ಮುಂದಿನ ನೀರಿನ ಅವಶ್ಯಕತೆಯನ್ನು ಪೂರೈಸಬೇಕೆಂದು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಯಾವಾಗ ಈ ಯೋಜನೆಯನ್ನು ಪೂರೈಸುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸರ್ಕಾರದವರ ಆಲೋಚನೆಯಲ್ಲದೆಯೆಂದು ಆಗಲೇ ಉತ್ತರ ಕೊಟ್ಟಿದ್ದೇನೆ.